# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 42 ಪ್ರಾ.ಸಾ. : 32**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ ದುರ್ಗಾ ತಾಳೇಕರ್ |
| ತಂದೆಯ ಹೆಸರು | : | ದುರ್ಗಾ ತಾಳೇಕರ್ |
| ವಯಸ್ಸು | : | 56 ವರ್ಷ |
| ಕೆಲಸ | : | ಎ.ಎಸ್.ಐ., ಕಾರವಾರ ಗ್ರಾಮೀಣ ಪೊಲೀಸ್ ಠಾಣೆ |
| ವಾಸ | : | ಕಾರವಾರ |

**ದಿನಾಂಕಃ 19-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. 2018 ನೇ ಇಸವಿಯಲ್ಲಿ ನಾನು ಕಾರವಾರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ನನ್ನನ್ನು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ನಿಯೋಜನೆ ಮಾಡಲಾಗಿತ್ತು. ದಿ.03-12-2018 ರಂದು ನಾನು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಕರ್ತವ್ಯದಲ್ಲಿರುವಾಗ, ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-69 ರವರು ನನಗೆ ಹಾಗೂ ಚಾಸಾ-43/ಸಿ.ಪಿ.ಸಿ-737 ರವರಿಗೆ ಈ ಪ್ರಕರಣದ 1 ನೇ ಆರೋಪಿಯ ಒಂದು ಫೋಟೊವನ್ನು ನೀಡಿ, ಆತ ಮಡಗಾಂವ್ ರೈಲ್ವೇ ನಿಲ್ದಾಣದಲ್ಲಿರುವ ಬಗ್ಗೆ ಮಾಹಿತಿ ಬಂದಿದ್ದು, ಈ ಕೂಡಲೇ ಮಡಗಾಂವ್ ರೈಲ್ವೇ ನಿಲ್ದಾಣಕ್ಕೆ ಹೋಗಿ 1 ನೇ ಆರೋಪಿಯನ್ನು ವಶಕ್ಕೆ ಪಡೆದು, ತಂದು ಹಾಜರುಪಡಿಸುವಂತೆ ಸೂಚಿಸಿದ್ದು, ಅದರಂತೆ ನಾನು ಹಾಗೂ ಚಾಸಾ-43 ರವರು ರಾತ್ರಿ 10.30 ಗಂಟೆಯ ಸಮಯದಲ್ಲಿ ಮಡಗಾಂವ್‌ನ ರೈಲ್ವೇ ನಿಲ್ದಾಣಕ್ಕೆ ಹೋಗಿ ನೋಡಿದಾಗ, ಅಲ್ಲಿ 1 ನೇ ಆರೋಪಿಯು ಪ್ಲಾಟ್ ಫಾರ್ಮ್ ನಲ್ಲಿ ಕುಳಿತಿದ್ದು, ಆತನ ಕೈಯಲ್ಲಿ ಒಂದು ಬ್ಯಾಗ್ ಇದ್ದು, ನಾವು ಆತನನ್ನು ಫೋಟೊದೊಂದಿಗೆ ಹೋಲಿಸಿ ನೋಡಿ, ಆತನ ಬಳಿ ನಮ್ಮ ಪರಿಚಯ ಹೇಳಿ, ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ, ಆತ ತನ್ನ ಹೆಸರು ರಿಜ್ವಾನ್ ತಂದೆ

ರೆಹಮುದ್ದೀನ್ ವನ್ಕರ್ ಎಂದು ಹಾಗೂ ತನ್ನ ವಿಳಾಸ ಕಾರವಾರದ ಕೆ.ಹೆಚ್.ಬಿ. ಕಾಲೋನಿಯ ಸಂಕ್ರಿವಾಡ ಎಂದು ತಿಳಿಸಿರುತ್ತಾನೆ. ನಂತರ ನಾವು ಆತನಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿ, ನಮ್ಮೊಂದಿಗೆ ಠಾಣೆಗೆ ಬರುವಂತೆ ತಿಳಿಸಿದಾಗ, ಆತನು ಬರಲು ಒಪ್ಪಿದ್ದು, ಆನಂತರ ನಾವು ಆತನನ್ನು ಕರೆದುಕೊಂಡು ಬಂದು ತನಿಖಾಧಿಕಾರಿಯಾದ ಚಾಸಾ–69 ರವರ ಮುಂದೆ ಹಾಜರುಪಡಿಸಿರುತ್ತೇವೆ ಹಾಗೂ ತನಿಖಾಧಿಕಾರಿಯು ತನಿಖೆಯನ್ನು ಮುಂದುವರಿಸಿರುತ್ತಾರೆ.

2. ಆನಂತರ 1 ನೇ ಆರೋಪಿ ಮತ್ತು ಮೃತ ಪ್ರೇಮ್ ಕುಮಾರನ ನಡುವೆ ವ್ಯವಹಾರದ ಸಲುವಾಗಿ ವೈಷಮ್ಯ ಇದ್ದು, ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಯರೊಂದಿಗೆ ಸಂಚು ರೂಪಿಸಿ ಪ್ರೇಮ್ ಕುಮಾರನನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಹಾಗೂ ಮಡಗಾಂವ್ ರೈಲ್ವೆ ನಿಲ್ದಾಣದಲ್ಲಿ 1 ನೇ ಆರೋಪಿಯ ಕೈಯಲ್ಲಿದ್ದ ಬ್ಯಾಗನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು ನಂ.18 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–</u>**

ನಾವು ಗೋವಾ ರಾಜ್ಯಕ್ಕೆ ಹೋದ ಬಗ್ಗೆ ಹೋದ ಬಗ್ಗೆ ನಮ್ಮ ಠಾಣೆಯ ಡೈರಿಯಲ್ಲಿ ಹಾಗೂ ಲಾಗ್ ಬುಕ್ ನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು, ನಮ್ಮಲ್ಲಿ ಲಾಗ್ ಬುಕ್ ಪಾಲಿಸುವ ವ್ಯವಸ್ಥೆ ಇರುವುದಿಲ್ಲ, ಆದರೆ ನಮ್ಮ ತನಿಖಾಧಿಕಾರಿಯು ಅವರ ಡೈರಿಯಲ್ಲಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ತನಿಖಾಧಿಕಾರಿಯು ಅವರ ಡೈರಿಯಲ್ಲಿ ನಮೂದಿಸಿರುವುದನ್ನು ನಾನು ನೋಡಿರುವುದಿಲ್ಲ. ನಾವು ಗೊವಾ ರಾಜ್ಯಕ್ಕೆ ಯಾವ ವಾಹನದಲ್ಲಿ ಹೋಗಿದ್ದೆವು ಎಂಬ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು, ನಾವು ಬಾಡಿಗೆ ಕಾರಿನಲ್ಲಿ ಹೋಗಿದ್ದು, ಈ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಯು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಗೋವಾ ರಾಜ್ಯಕ್ಕೆ ಹೋದ ಬಗ್ಗೆ ಅಲ್ಲಿಯ ಪೊಲೀಸರಿಗೆ ನಾವು ಮಾಹಿತಿಯನ್ನು ನೀಡಿರುವುದಿಲ್ಲ. ಹೊರರಾಜ್ಯದ ಪೊಲೀಸರಿಗೆ ಮಾಹಿತಿ ನೀಡಬೇಕಾಗುತ್ತದೆ ಎಂದರೆ ಸರಿ. 1 ನೇ ಆರೋಪಿಯನ್ನು ಮಡಗಾಂವ್ ರೈಲ್ವೆ ನಿಲ್ದಾಣದಲ್ಲಿ ವಶಕ್ಕೆ ಪಡೆದ ಬಗ್ಗೆ ರೈಲ್ವೆ ಪೊಲೀಸರಿಗೂ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ವಶಕ್ಕೆ ಪಡೆದ ಬಗ್ಗೆ

ಯಾವುದೇ ದಾಖಲೆ ಇರುವುದಿಲ್ಲ. ನಾವು ಮಡಗಾಂವ್ ರೈಲ್ವೇ ನಿಲ್ದಾಣಕ್ಕೆ ಹೋಗಿಲ್ಲ ಹಾಗೂ ಅಲ್ಲಿ 1 ನೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. 1, 2 ಮತ್ತು 3 ನೇ ಆರೋಪಿತರು ಸಂಚು ರೂಪಿಸಿ, ಪ್ರೇಮ್ ಕುಮಾರನನ್ನು ಕೊಲೆ ಮಾಡಿರುತ್ತಾರೆ ಎಂದು ನನಗೆ ವಿಷಯ ತಿಳಿಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲು ನಂ.18 ಬ್ಯಾಗನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರಃ–**

ಈ ದಿನ 5 ನೇ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ. ಆದ್ದರಿಂದ 1 ನೇ ಆರೋಪಿಯು ಸ್ವತಃ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ